ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) :—

1. ರಾಜ್ಯದಲ್ಲಿ ಒಟ್ಟು 43,217 ಮುಜರಾಯಿ ದೇವಾಲಯಗಳು ಇವೆ.

1997-98ನೇ ಸಾಲಿನಲ್ಲಿ ಸರ್ಕಾರದಿಂದ ದೇವಾಲಯಗಳ ಅಭಿವೃದ್ಧಿಗಾಗಿ ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲಾಗಿದೆ.

ಕ್ರ. ಸಂ.	ಸಾಮಾನ್ಯ ಅನುದಾನ ಜೀರ್ಣೋದ್ಧಾರ	ನಿರ್ಮಾಣ	ಆರಾಧನಾ ಯೋಜನೆ
1)	1,76,00,000-00	1,55,00,000	5,00,00,000

2) "ಸಾಮಾನ್ಯ ಅನುದಾನ" ಅಡಿಯಲ್ಲಿ ಪ್ರಸ್ತಾವನೆಗಳ ಅನುಗುಣವಾಗಿ ಅನುದಾನ ಮಂಜೂರು ಮಾಡುವ ಪರಿಪಾಠವಿದ್ದು, ರಾಯಚೂರು ಜಿಲ್ಲೆಗೆ 1997-98ನೇ ಸಾಲಿನಲ್ಲಿ ಜೀರ್ಣೋದ್ಧಾರಕ್ಕೆ ರೂ.7,10,000-00 ಮತ್ತು ನಿರ್ಮಾಣಕ್ಕಾಗಿ ರೂ.29,55,000-00 ಬಿಡುಗಡೆ ಮಾಡಲಾಗಿದೆ. ಆರಾಧನಾ ಯೋಜನೆಯಡಿಯಲ್ಲಿ ವಿಧಾನಸಭಾ ಕ್ಷೇತ್ರವಾರು ಸಮಾನವಾಗಿ ಅನುದಾನ ಬಿಡುಗಡೆ ಮಾಡುವ ಪರಿಪಾಠವಿದ್ದು, 1997-98ನೇ ಸಾಲಿನಲ್ಲಿ ರಾಯಚೂರು 6 ವಿಧಾನಸಭಾ ಕ್ಷೇತ್ರಕ್ಕೆ ಒಟ್ಟು 12,99,780-00 ಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

ದೇವದುರ್ಗ ತಾಲ್ಲೂಕಿನಲ್ಲಿ ಆಶ್ರಯ ಮನೆಗಳ ಮಂಜೂರಾತಿ.

142(441) ಶ್ರೀಮತಿ ಬಿ.ಟಿ. ಲಲಿತಾ ನಾಯಕ್ (ದೇವದುರ್ಗ) :— ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 1997-98ನೇ ಸಾಲಿನಲ್ಲಿ ರಾಜ್ಯದ ಬಡಜನರಿಗೆ ಹಂಚಿಕೆ ಮಾಡಲಾದ ಮನೆಗಳ ಒಟ್ಟು ಸಂಖ್ಯೆ ಎಷ್ಟು ;

ಆ) ಅವುಗಳ ಪೈಕಿ ರಾಯಚೂರು ಜಿಲ್ಲೆಗೆ ಹಂಚಿಕೆ ಮಾಡಲಾದ ಮನೆಗಳ ಸಂಖ್ಯೆ ಎಷ್ಟು ; ಹಾಗೂ ಇನ್ನೂ ಹಂಚಿಕೆ ಮಾಡಲು ಉದ್ದೇಶಿಸಿರುವ ಮನೆಗಳ ಸಂಖ್ಯೆ ಎಷ್ಟು ;

ಇ) 1998-99ನೇ ಸಾಲಿನಲ್ಲಿ ದೇವದುರ್ಗ ತಾಲ್ಲೂಕಿನಲ್ಲಿ ಅತಿವೃಷ್ಟಿಯಿಂದಾಗಿ ನೂರಾರು ಮನೆಗಳು ಬಿದ್ದಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಪರಿಹಾರಕ್ಕಾಗಿ ಸರ್ಕಾರ ಬಿಡುಗಡೆ ಮಾಡಿದ ಹಣ ಎಷ್ಟು ಮತ್ತು ಎಷ್ಟು ಜನ ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆ ಹಾಗೂ ಯಾವ ಯಾವ ಯೋಜನೆಗಳ ಅಡಿಯಲ್ಲಿ ಹಂಚಿಕೆ ಮಾಡಲಾಗಿದೆ;

ಉ) ಕೊಳಚೆ ನಿರ್ಮೂಲನಾ ಮಂಡಳಿಯಿಂದ ದೇವದುರ್ಗ ತಾಲ್ಲೂಕಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ಇದುವರೆವಿಗೂ ಯಾವ ಯಾವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :—

ಅ) ಆಶ್ರಯ - 70,633
ಅಂಬೇಡ್ಕರ್ - 21,100
ಇಂದಿರಾ ಆವಾಸ್ - 37,652

	97-98ನೇ ಸಾಲಿನಲ್ಲಿ ನೀಡಿದ ಮನೆಗಳ ಸಂಖ್ಯೆ	98-99ನೇ ಸಾಲಿನಲ್ಲಿ ಹಂಚಿಕೆ ಮಾಡಲು ಉದ್ದೇಶಿಸಿರುವ ಮನೆಗಳ ಸಂಖ್ಯೆ
ಆಶ್ರಯ	1525	1125
ಅಂಬೇಡ್ಕರ್	629	679
ಇಂದಿರಾ ಆವಾಜ್	2535	1871

ಇ) ಬಂದಿದೆ.

ಈ) ವಸತಿ ಇಲಾಖೆಗೆ ಸಂಬಂಧಿಸಿದಂತೆ 1998-99ನೇ ಸಾಲಿನಲ್ಲಿ ಆಶ್ರಯ ಯೋಜನೆಯಲ್ಲಿ ಅತಿವೃಷ್ಟಿಯಿಂದ ಮನೆ ಕಳೆದುಕೊಂಡವರಿಗೆ ದೇವದುರ್ಗ ತಾಲ್ಲೂಕಿಗೆ 500 ಮನೆಗಳ ಗುರಿಯನ್ನು ನೀಡಲಾಗಿದೆ.

ಈ) 1996-97ನೇ ಸಾಲಿನ ರಾಷ್ಟ್ರೀಯ ಕೊಳಚೆ ಪ್ರದೇಶ ಅಭಿವೃದ್ಧಿ ಯೋಜನೆಯಡಿ ಮಂಡಳಿಗೆ ನೀಡಿದ ಅನುಧಾನದಲ್ಲಿ 6.75 ಲಕ್ಷ ರೂ.ಗಳನ್ನು ನಿಗಧಿಪಡಿಸಿ ಘೋಷಣೆಯು ತಡವಾದ ಕಾರಣ ನೇತಾಜಿ ಓಣಿ ಕೊಳಚೆ ಪ್ರದೇಶದಲ್ಲಿ ಮಳೆ ನೀರಿನ ಚರಂಡಿಯ ಕಾಮಗಾರಿಯನ್ನು ಡಿಸೆಂಬರ್ 98ರಲ್ಲಿ ಪ್ರಾರಂಭಿಸಿದ್ದು, ಪೂರ್ಣಗೊಳ್ಳುವ ಹಂತದಲ್ಲಿದೆ.

1997-98ನೇ ಸಾಲಿನಲ್ಲಿ ರಾಷ್ಟ್ರಪತಿ ಓಣಿ ಕೊಳಚೆ ಪ್ರದೇಶದ ಅಭಿವೃದ್ಧಿಗಾಗಿ 1.00 ಲಕ್ಷಗಳನ್ನು ನಿಗಧಿಪಡಿಸಿದ್ದು ಘೋಷಣೆಯು ವಿಳಂಬವಾದ ಕಾರಣ ಕಾಮಗಾರಿಯನ್ನು ತೆಗೆದುಕೊಳ್ಳಲಾಗಲಿಲ್ಲ. ಪ್ರಸಕ್ತ ಸಾಲಿನ ಅಂದರೆ 1999-2000ರ ಮಂಡಳಿಯ ಕ್ರಿಯಾ ಯೋಜನೆಯಡಿ ಅನುದಾನ ನಿಗಧಿಪಡಿಸಿ ಕಾಮಗಾರಿಯನ್ನು ತೆಗೆದಕೊಳ್ಳಲಾಗುವುದು.